ಎಂ.ವಿ.ಸಿ. ನಂ.436/2018ರಲ್ಲಿ
ಆರ್.ಡಬ್ಲ್ಯೂ-1(ಪೂಣಚ್ಚ)

ದಿನಾಂಕ 07-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಿಂದಃ-

ನಾನು 2ನೇ ಎದುರುದಾರ ಕಂಪನಿಯಲ್ಲಿ ಲೀಗಲ್ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಅಪಘಾತದ ಬಗ್ಗೆ ಕಂಪಪನಿಯಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ಅಪಘಾತದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ನಾನು ವೈಯಕ್ತಿಕವಾಗಿ ಕಂಪನಿಯ ಪರವಾಗಿ ತನಿಖೆ ಮಾಡಿಲ್ಲ. ಆಪಾದಿತ ವಾಹನದ ಚಾಲಕನಿಗೆ ಡಿಎಲ್ ಇರಲಿಲ್ಲ ಎಂಬ ಬಗ್ಗೆ ಆರ ಟಿ ಓ ಇಂದ ದಾಖಲೆ ಪಡೆದುಕೊಂಡಿದ್ದೀರಾ ಅಂದರೆ ನೋಟೀಸ್ ಕೊಟ್ಟಿದ್ದೇವೆ ರಿಪ್ಲೈ ಬಂದಿಲ್ಲ. ಆರ ಟಿ ಓ ದಲ್ಲಿ ನಾನು ಖುದ್ದಾಗಿ ಹೋಗಿ ಪರಿಶೀಲನೆ ಮಾಡಿಲ್ಲ. ಆಪಾದಿತ ವಾಹನಕ್ಕೆ ಅಪಘಾತದ ಕಾಲಕ್ಕೆ ವಿಮೆ ಇತ್ತು ಅಂದರೆ ಸರಿ. ಆಪಾದಿತ ವಾಹನದ ಚಾಲಕ ವಾಹನವನ್ನು ಅತಿವೇಗವಾಗಿ ಚಲಾಯಿಸುತ್ತಿದ್ದ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಆಪಾದಿತ ವಾಹನದ ಚಾಲಕನಿಗೆ ಅಪಘಾತದ ಕಾಲಕ್ಕೆ ಡಿಎಲ್ ಇದ್ದು ನಮ್ಮ ಕಂಪನಿಯ ಪರಿಹಾರ ಪಾವತಿಸಲು ಬದ್ದ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡ ಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.